# ರೋಮಾಂಚನ ಹುಟ್ಟಿಸಿದ ಅಣ್ಣಾವ್ರ ಹೆಸರು

■ರಾಘವೇಂದ್ರ ಕೆ.

◆ ನಟ ಆಗಬೇಕು ಎನ್ನುವ ಯೋಚನೆ ಬಂದಿದ್ದು ಹೇಗೆ?

ನಟಿಸಬೇಕು ಎನ್ನುವ ಯೋಚನೆ ಇರಲಿಲ್ಲ. ಆಕಸ್ಮಿಕವಾಗಿ ನಟನಾದೆ. ಸ್ವಂತ ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆ ಇತ್ತು. ಓದುತ್ತಲೇ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದೆ. ಕೆಲವು ಬ್ರ್ಯಾಂಡ್‌ಗಳ ಹೋಸ್ಟ್ ಮಾಡುತ್ತಿದ್ದೆ. ಒಮ್ಮೆ 'ಮತ್ತೆ ಬನ್ನಿ ಪ್ರೀತ್ಸೋಣ' ಸಿನಿಮಾ ಪ್ರಚಾರ ಕಾರ್ಯಕ್ರಮಕ್ಕೆ ನಿರೂಪಕನಾಗಿ ಹೋಗಿದ್ದೆ. ಅದಾಗಿ ಹದಿನೈದು ದಿನಗಳ ನಂತರ ಆ ಸಿನಿಮಾ ವ್ಯವಸ್ಥಾಪಕ ಫೋನ್ ಮಾಡಿ ಸೀರಿಯಲ್ ಆಡಿಷನ್‌ಗೆ ಹಾಜರಾಗಲು ಸೂಚಿಸಿದರು. ಯಶಸ್ವಿ ಆಗಬಲ್ಲೆ ಎನ್ನುವ ಭರವಸೆ ಇಲ್ಲದ ಕಾರಣ ವಿಶ್ವಾಸ ಮೂಡಲಿಲ್ಲ. ಗೆಳೆಯರು ಕುಟುಂಬದವರು ಪ್ರಯತ್ನಿಸಲು ಸಲಹೆ ನೀಡಿದರು. ಆಡಿಷನ್ ನೀಡಿದೆ .'ಸೊಸೆ ತಂದ ಸೌಭಾಗ್ಯ'ಕ್ಕೆ ಅವಕಾಶ ಸಿಕ್ಕಿತು. ಮೂಲತಃ ಭರತನಾಟ್ಯ ಕಲಾವಿದ. ಅದನ್ನೇ ವೃತ್ತಿಪರವಾಗಿ ತೆಗೆದುಕೊಂಡಿದ್ದೆ. ನಾಟ್ಯ ಇರುವುದರಿಂದ ನಟನೆ ಸುಲಭ ಅನ್ನಿಸಿತು.

◆ ನಾಟ್ಯದ ಪ್ರೀತಿ ಹುಟ್ಟಿದ್ದು ಹೇಗೆ?

ಬೆಂಗಳೂರಿನಲ್ಲೇ ಹುಟ್ಟಿ ಬೆಳೆದಿದ್ದೇನೆ. ಅಪ್ಪ ಸುಗ್ಗನಹಳ್ಳಿ ಷಡಕ್ಷರಿ ಅವರೂ ಭರತನಾಟ್ಯ ಕಲಾವಿದರು. ಅವರು ತುಂಬ ವರ್ಷಗಳಿಂದ ಅಭ್ಯಾಸ ಮಾಡುತ್ತಲೇ ನಾಟ್ಯ ಕಲಿಸುತ್ತಾರೆ. ತಮ್ಮ ಮಗ ಕೂಡ ನಾಟ್ಯವನ್ನು ಕಲಿಯಬೇಕು ಎನ್ನುವ ಅಭಿಲಾಷೆ ಇತ್ತು. ನಾಟ್ಯದ ಓಂಕಾರವನ್ನು ಅವರೇ ಹಾಡಿದರು. ಕಲಿಯುತ್ತಾ ಅದರ ಬಗ್ಗೆ ಆಸಕ್ತಿಯೂ ಹೆಚ್ಚಾಯಿತು. ಹತ್ತಾರು ವರ್ಷ ಶ್ರದ್ಧೆಯಿಂದ ಅಭ್ಯಾಸ ಮಾಡಿದೆ. ನಂತರ ಕಾರ್ಯಕ್ರಮಗಳನ್ನು ನೀಡಲು ಆರಂಭಿಸಿದೆ.

◆ ಮತ್ತೆ ಮತ್ತೆ 'ಗಂಧದ ಗುಡಿ', ಏನಿದರ ವಿಶೇಷ?

'ಬಿಗ್‌ಬಾಸ್' ಮುಗಿದ ನಂತರ ಅನೇಕ ಕಥೆಗಳು ಬಂದಿದ್ದವು. ತುಂಬ ಪ್ರಾಯೋಗಿಕ ಯೋಚನೆ ಮಾಡುವುದರಿಂದ ತಕ್ಷಣ ಯಾವುದನ್ನೂ ಒಪ್ಪಲಿಲ್ಲ. ಏಕತಾನತೆಯ ಕೆಲಸಕ್ಕಿಂತ ಬೇರೆ ಇನ್ನೇನಾದರೂ ಮಾಡಬೇಕು ಎನ್ನುವ ಹುಡುಕಾಟದಲ್ಲಿದ್ದೆ. ಹಾಗೆಂದು ಸಿನಿಮಾವನ್ನೇ ಮಾಡಬೇಕು ಎನ್ನುವ ಅಹಮ್ಮಿಕೆಯೂ ಇರಲಿಲ್ಲ. ಕಿರುತೆರೆಯ ಮೂಲಕವೇ ಬೆಳೆದಿದ್ದೇನೆ. ಮತ್ತೆ ಸೀರಿಯಲ್ ಮಾಡಿದರೆ ವಿಶೇಷ ಕಥೆಯೇ ಆಗಬೇಕು ಎನ್ನುವುದು ನನ್ನಾಸೆಯಾಗಿತ್ತು. ಫ್ಯಾಮಿಲಿ ಡ್ರಾಮಾ ಕಥೆಗಳು ಬಂದಿದ್ದವು, ಏನೂ ಮಾಡದಿದ್ದರೂ ಅವು ಬೇಡ ಎಂದು ಸುಮ್ಮನಾಗಿದೆ.

ಶಿಶಿರ್ ಶಾಸ್ತ್ರಿ
ಕಲರ್ಸ್ ಕನ್ನಡ 'ಗಂಧದ ಗುಡಿ' ಮುತ್ತುರಾಜ



ಇದರಲ್ಲಿ ನಾಲ್ಕು ಜನ ಅಣ್ಣ ತಮ್ಮಂದಿರು. ಲೀಡ್ ಎಂದು ಒಂದು ಪಾತ್ರವನ್ನು ತೋರಿಸಲು ಆಗಲ್ಲ. ತಮಿಳು ಮೂಲದ ಕಥೆ ಇದು ಎನ್ನುವುದೂ ಗೊತ್ತಿತ್ತು. ಮಾತುಕತೆಗೆ ಆಹ್ವಾನ ಬಂದಾಗ ತಮಿಳಿನ ಮೂರು ಕಂತು ಧಾರಾವಾಹಿ ನೋಡಿಕೊಂಡೇ ಹೋಗಿದ್ದೆ. ಅದನ್ನು ಒಪ್ಪುವುದಕ್ಕಿಂತ ಬಿಡುವ ಯೋಚನೆ ಇತ್ತು. ಸಭೆಯಲ್ಲಿ ತಮಿಳು ಮತ್ತು ಕನ್ನಡದ ಎರಡು ತಂಡವೂ ಇದ್ದವು. ಕಥೆಯನ್ನು ಎಳೆ ಎಳೆಯಾಗಿ ನಿರೂಪಿಸಿ ಈ ಪಾತ್ರದ ವಿಶೇಷವನ್ನು ತಿಳಿಸಿದರು. ಸಾಮಾನ್ಯವಾಗಿ ಒಬ್ಬ ನಾಯಕನಿಗೆ ಇರದೇ ಇರುವ ವಿಶೇಷಣಗಳು ಇವನಿಗಿವೆ. ಒರಟನಲ್ಲ, ಅಹಮಿಕೆ ಇಲ್ಲ, ಹೀರೊಯಿಸಂ ತೋರಿಸುವುದಿಲ್ಲ ಎಂದರು. ನಟನಾಗಿ ಸವಾಲಿನ ಪಾತ್ರ, ಒಳ್ಳೆಯ ಅವಕಾಶ ಅನ್ನಿಸಿತು. ದ್ವೇಷಾಸೂಯೆ, ಕೋಪವಿಲ್ಲದ ಮುಗ್ಧನ ಪಾತ್ರ. ತಾಯಿ ಇಲ್ಲದ ಮನೆಯಲ್ಲಿ ಮೂವರು ತಮ್ಮಂದಿರನ್ನು ಪೋಷಣೆ ಮಾಡುವುದು ಅಮೋಘ ಅನುಭವ ನೀಡಬಲ್ಲದು. ಭಾವುಕ ವ್ಯಕ್ತಿತ್ವವನ್ನು ಆಡಂಬರ ಇಲ್ಲದಂತೆ ನಿರ್ವಹಿಸಬೇಕಿತ್ತು. ಜಾಸ್ತಿಯೂ ನಟಿಸದೆ, ಕಡಿಮೆಯೂ ಆಗದಂತೆ ಸಮತೋಲನದಿಂದ ನಿರ್ವಹಿಸುವ ಪಾತ್ರ. ಏಕೋ ತುಂಬ ಕನೆಕ್ಟ್ ಆಯಿತು. ಮನೆಗೆ ಹೋಗಿ ಮತ್ತೆ ಹತ್ತಾರು ಕಂತು ನೋಡಿದೆ. ತಮಿಳಿನಲ್ಲಿ ನನ್ನ ಪಾತ್ರ ನಿರ್ವಹಿಸುತ್ತಿದ್ದವರು ನನ್ನ ಗೆಳೆಯ. ಅವರಿಗೆ ಫೋನ್ ಮಾಡಿ ವಿಚಾರಿಸಿದೆ. ಕಣ್ಣುಮುಚ್ಚಿ ಒಪ್ಪಿಕೊ ಎಂದರು. ಒಟ್ಟಾರೆ ತುಂಬ ಒಳ್ಳೆಯ ಪಾತ್ರ.

◆ ಮುಂದಿನ ದಾರಿಯ ಬಗ್ಗೆ ಏನು ಯೋಚನೆ ಮಾಡಿದ್ದೀರಿ?

ಇದು ಒಂದು ಹಂತಕ್ಕೆ ಬರುವ ತನಕ ಬೇರೆ ಯೋಚನೆ ಇಲ್ಲ. ಪ್ರಚಾರ ಕಾರ್ಯದಲ್ಲಿಯೂ ಭಾಗಿಯಾಗುತ್ತಿದ್ದೇನೆ. ಸದ್ಯ ನನ್ನ 'ಅಲೆವ ಮೋಡ' ಸಿನಿಮಾ ಬಿಡುಗಡೆ ಆಗುವುದಿದೆ. ಅದರ ಸಿದ್ಧತೆ ಕೂಡ ನಡೀತಿದೆ. ಸಂಗೀತ ಪ್ರಧಾನ ಸಿನಿಮಾದಲ್ಲಿ ಸಂಗೀತ ದಿಗ್ಗಜರ ತಂಡವೇ ಕೆಲಸ ಮಾಡಿದೆ. ಐಶ್ವರ್ಯ ಅವರ ಜೊತೆ ಸೇರಿ 'ಹರ' ಎಂಬ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದ್ದೇನೆ. ಅದರ ಮೂಲಕ ಆ್ಯಡ್, ಬ್ರ್ಯಾಂಡ್, ಪ್ರೊಫೈಲ್ ಶೂಟ್ ಮಾಡುತ್ತಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ ಏನು ಮಾಡಬೇಕು ಎನ್ನುವ ಯೋಚನೆ ಕೂಡ ಇದೆ. ಟೀವಿ ಕ್ಷೇತ್ರದಲ್ಲಿಯೇ ಸ್ವತಂತ್ರ ನಿರ್ಮಾಪಕ ಆಗಬೇಕು. ಸ್ವತಃ ಕಥೆಯನ್ನು ಬರೆಯುವುದರಿಂದ ಆ ನಿಟ್ಟಿನಲ್ಲಿಯೂ ಪ್ರಯತ್ನ ನಡೀತಿದೆ. 'ಗಂಧದ ಗುಡಿ' ಮುಗಿದ ನಂತರ ಸ್ವಂತ ಧಾರಾವಾಹಿ ನಿರ್ಮಿಸುವುದು ಪ್ರಮುಖ ಗುರಿ.

◆ ಮುತ್ತುರಾಜ್ ಅಂದ ಮೇಲೆ ದೊಡ್ಮನೆಯ ನೆನಪು ಕಾಡಲಿಲ್ಲವೇ?

ಚಿತ್ರೀಕರಣ ಆರಂಭವಾಗಿ 15 ದಿನಗಳು ಕಳೆದ ಮೇಲೆ ಟೈಟಲ್ ಗೊತ್ತಾಯಿತು. 'ಗಂಧದ ಗುಡಿ' ಅಂದ ತಕ್ಷಣ ನೆನಪು ಬಂತು. ನಾವು ನಾಲ್ಕು ಜನ ಅಣ್ಣತಮ್ಮಂದಿರು. ಎಲ್ಲರ ಹೆಸರೂ ಅಣ್ಣಾವ್ರ ಸಿನಿಮಾ ಹೆಸರುಗಳು. ನನ್ನ ತಮ್ಮಂದಿರು ಹರಿಶ್ಚಂದ್ರ, ಕಂಠೀರವ, ಮಯೂರ ಇದ್ದಾರೆ. ಆ ಹೆಸರು ಕೇಳಿದ ತಕ್ಷಣವೇ ರೋಮಾಂಚನವಾಯಿತು. ಧಾರಾವಾಹಿ ಹೆಸರು ಗೊತ್ತಾದ ತಕ್ಷಣ ಭಯ ಆಯಿತು. ಗೊತ್ತಿಲ್ಲದಂತೆ ಅದರ ಮಹತ್ವ ಮತ್ತು ಜವಾಬ್ದಾರಿ ಹೆಚ್ಚಿದೆ ಎನ್ನುವ ಎಚ್ಚರಿಕೆ ಹುಟ್ಟಿತು. ನಿರೀಕ್ಷೆಯನ್ನು ತಲುಪಲು ಸಾಧ್ಯವೇ ಎಂದು ಯೋಚಿಸಿದೆ. ಪ್ರಸಾರಕ್ಕೂ ಮುನ್ನ ಮೂರು ಕಂತುಗಳನ್ನು ನೋಡಿದ ಮೇಲೆ ನಿಟ್ಟುಸಿರು ಬಿಟ್ಟೆ. ರಾಜಣ್ಣ, ಶಿವಣ್ಣ ಇದೇ ಹೆಸರಿನ ಸಿನಿಮಾ ಮಾಡಿದ್ದಾರೆ. ಪುನೀತ್ ಸರ್ ಅವರ ಕೊನೆಯ ಸಿನಿಮಾ ಕೂಡ. ಒಟ್ಟಾರೆ ಅವರ ಆಶೀರ್ವಾದ ಇದೆ ಎಂದುಕೊಂಡಿದ್ದೇನೆ. ■